ಭಾನುವಾರ 01.02.2026
ಬೆಂಗಳೂರು, ಬೆಲೆ: 5ರೂ,
2 ಪುಟಗಳು
ಸಂಪುಟ 01 - ಸಂಚಿಕೆ 132
Digital Varthe Kannada Daily
Volume 01 - Issue 132
Sunday, 01.02.2026
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

ಕನ್ನಡ ದಿನಪತ್ರಿಕೆ

DIGITAL VARTHE

digitalvarthe@gmail.com
www.digitalvarthe.com

## ಸರ್ಕಾರಿ ಬಸ್ಸುಗಳಲ್ಲಿ ತಂಬಾಕು ಜಾಹೀರಾತು ಬ್ಯಾನ್



**ಬೆಂಗಳೂರು:** ರಾಜ್ಯದ ಎಲ್ಲಾ ಸಾರಿಗೆ ನಿಗಮಗಳ ಬಸ್ಸುಗಳಲ್ಲಿ ತಂಬಾಕು ಉತ್ಪನ್ನಗಳಿಗೆ ಸಂಬಂಧಿಸಿದ ಪೋಸ್ಟರ್‌ಗಳು ಮತ್ತು ಜಾಹೀರಾತುಗಳನ್ನು ತಕ್ಷಣದಿಂದಲೇ ನಿಷೇಧಿಸುವಂತೆ ಸಾರಿಗೆ ಸಚಿವ Ramalinga Reddy ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ. ಈ ಮೂಲಕ ಸರ್ಕಾರಿ ಬಸ್ಸುಗಳ ಮೇಲೆ ಬಹಳ ದಿನಗಳಿಂದ ರಾರಾಜಿಸುತ್ತಿದ್ದ ಪಾನ್ ಮಸಾಲಾ ಹಾಗೂ ತಂಬಾಕು ಉತ್ಪನ್ನಗಳ ಪ್ರಚಾರಕ್ಕೆ ಸರ್ಕಾರ ಸಂಪೂರ್ಣ ಬ್ರೇಕ್ ಹಾಕಿದಂತಾಗಿದೆ. ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ತೆಗೆದುಕೊಳ್ಳಲಾದ ಈ ನಿರ್ಧಾರ ಸರ್ಕಾರದ ಮಹತ್ವದ ಕ್ರಮವೆಂದು ಪರಿಗಣಿಸಲಾಗಿದೆ.

ಕಳೆದ ಕೆಲವು ತಿಂಗಳಿನಿಂದ KSRTC, BMTC ಸೇರಿದಂತೆ ನಾಲ್ಕೂ ಸಾರಿಗೆ ನಿಗಮಗಳ ಬಸ್ಸುಗಳ ಹಿಂಭಾಗ ಹಾಗೂ ಬಸ್ಸಿನ ಸುತ್ತಮುತ್ತ ಪಾನ್ ಮಸಾಲಾ ಮತ್ತು ತಂಬಾಕು ಉತ್ಪನ್ನಗಳ ಬೃಹತ್ ಜಾಹೀರಾತುಗಳು ಅಂಟಿಸಲ್ಪಟ್ಟಿದ್ದವು. ಸರ್ಕಾರವೇ ಒಂದು ಕಡೆ ತಂಬಾಕು ಮುಕ್ತ ಸಮಾಜದ ಕುರಿತು ಜಾಗೃತಿ ಮೂಡಿಸುತ್ತಿದ್ದರೆ, ಮತ್ತೊಂದೆಡೆ ಸರ್ಕಾರಿ ಬಸ್ಸುಗಳಲ್ಲಿ ಇಂತಹ ಜಾಹೀರಾತುಗಳಿಗೆ ಅವಕಾಶ ನೀಡುತ್ತಿರುವುದು ವೈರುಧ್ಯಕರ ಎಂದು ಸಾರ್ವಜನಿಕರು, ಆರೋಗ್ಯ ಹೋರಾಟಗಾರರು ಮತ್ತು ವಿವಿಧ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಈ ವಿರೋಧದ ಹಿನ್ನೆಲೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂಬ ಒತ್ತಡ ಹೆಚ್ಚಾಗಿತ್ತು.

ಈ ಸಾರ್ವಜನಿಕ ಆಕ್ರೋಶಕ್ಕೆ ಸ್ಪಂದಿಸಿರುವ ಸಚಿವರು ಈಗ ಸ್ಪಷ್ಟ ಹಾಗೂ ಕಠಿಣ ನಿರ್ದೇಶನ ನೀಡಿದ್ದಾರೆ. ಸಚಿವರ ಆದೇಶವು NWKRTC ಮತ್ತು KKRTC ಸೇರಿದಂತೆ ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳ ಬಸ್ಸುಗಳಿಗೆ ಅನ್ವಯವಾಗಲಿದೆ. ಆದಾಯಕ್ಕಾಗಿ ಜಾಹೀರಾತು ಅಗತ್ಯವಿದ್ದರೂ ಜನರ ಆರೋಗ್ಯದ ಬೆಲೆಗೆ ಅದು ಇರಬಾರದು ಎಂಬುದು ಸರ್ಕಾರದ ನಿಲುವು ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ. ತಂಬಾಕು ಪ್ರಚಾರವು ಯುವಜನತೆಗೆ ತಪ್ಪು ಸಂದೇಶ ನೀಡುತ್ತದೆ ಹಾಗೂ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂಬ ಕಾರಣಕ್ಕೆ ಈ ನಿರ್ಧಾರ ಅನಿವಾರ್ಯ ಎಂದು ಹೇಳಿದ್ದಾರೆ.

ನಿಯಮವನ್ನು ಉಲ್ಲಂಘಿಸಿ ಮತ್ತೆ ಇಂತಹ ಜಾಹೀರಾತುಗಳನ್ನು ಅಂಟಿಸಿದರೆ ಸಂಬಂಧಪಟ್ಟ ಅಧಿಕಾರಿಗಳು, ಗುತ್ತಿಗೆ ಏಜೆನ್ಸಿಗಳು ಹಾಗೂ ಜಾಹೀರಾತು ಸಂಸ್ಥೆಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸರ್ಕಾರ ಎಚ್ಚರಿಕೆ ನೀಡಿದೆ. ಸಚಿವರ ಸೂಚನೆ ಹೊರಬಿದ್ದ ತಕ್ಷಣವೇ ಸಾರಿಗೆ ಇಲಾಖೆಯ ಅಧಿಕಾರಿಗಳು



ಕಾರ್ಯಪ್ರವೃತ್ತರಾಗಿದ್ದು, ಡಿಪೋಗಳಲ್ಲಿ ನಿಲ್ಲಿಸಿರುವ ಬಸ್ಸುಗಳ ಮೇಲಿರುವ ತಂಬಾಕು ಉತ್ಪನ್ನಗಳ ಪೋಸ್ಟರ್‌ಗಳನ್ನು ತೆರವುಗೊಳಿಸುವ ಕಾರ್ಯ ಆರಂಭವಾಗಿದೆ.

ಇನ್ನು ಮುಂದೆ ಖಾಸಗಿ ಜಾಹೀರಾತು ಒಪ್ಪಂದಗಳನ್ನು ಮಾಡುವಾಗ ತಂಬಾಕು ಸಂಬಂಧಿತ ಯಾವುದೇ ಉತ್ಪನ್ನಗಳನ್ನು ಸ್ಪಷ್ಟವಾಗಿ ಹೊರಗಿಡುವಂತೆ ಇಲಾಖೆಗೆ ಸೂಚನೆ ನೀಡಲಾಗಿದೆ. ಸಾರ್ವಜನಿಕ ಆರೋಗ್ಯವೇ ಸರ್ಕಾರದ ಪ್ರಾಥಮಿಕತೆ ಎಂಬ ಸಂದೇಶವನ್ನು ಈ ಕ್ರಮದ ಮೂಲಕ ಸಾರಲಾಗಿದೆ. ಸರ್ಕಾರದ ಈ ನಿರ್ಧಾರಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದ್ದು, ಆರೋಗ್ಯ ಕಾರ್ಯಕರ್ತರು ಇದನ್ನು ಸ್ವಾಗತಿಸಿದ್ದಾರೆ. ಜನರ ಆರೋಗ್ಯದ ಹಿತದೃಷ್ಟಿಯಿಂದ ತೆಗೆದುಕೊಂಡ ಸಮಯೋಚಿತ ಕ್ರಮವೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

## ಕಾನ್ಫಿಡೆಂಟ್ ಗ್ರೂಪ್ ಚೇರ್ಮನ್ ಸಿ.ಜೆ. ರಾಯ್ ಆತ್ಮಹ*ತ್ಯೆ

**ಬೆಂಗಳೂರು:** ಸಿಲಿಕಾನ್ ಸಿಟಿಯ ಪ್ರಮುಖ ರಿಯಲ್ ಎಸ್ಟೇಟ್ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದ್ದ Confident Group ಸಂಸ್ಥೆಯ ಮುಖ್ಯಸ್ಥ C. J. Roy ಅವರು ತಮ್ಮ ನಿವಾಸದಲ್ಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ಬೆಂಗಳೂರಿನಲ್ಲಿ ನಡೆದಿದೆ. ನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಅವರ ಐಷಾರಾಮಿ ಬಂಗಲೆಯಲ್ಲಿ ಈ ಘಟನೆ ಸಂಭವಿಸಿದ್ದು, ವ್ಯಾಪಾರ ವಲಯದಲ್ಲಿ ಆಘಾತ ಮೂಡಿಸಿದೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಇಂದು ಬೆಳಗಿನ ವೇಳೆ ತಮ್ಮ ಮನೆಯೊಳಗೆ ಇದ್ದಕ್ಕಿದ್ದಂತೆ ಸಿ.ಜೆ. ರಾಯ್ ತಮ್ಮ ಖಾಸಗಿ ಪಿಸ್ತೂಲ್ ಬಳಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಘಟನೆ ನಡೆದ ವೇಳೆಗೆ ಮನೆಯೊಳಗೆ ಕೆಲವು ಸಿಬ್ಬಂದಿ ಹಾಗೂ ಅಧಿಕಾರಿಗಳು ಇದ್ದಿರಬಹುದೆಂಬ ಮಾಹಿತಿ ಲಭ್ಯವಾಗಿದ್ದು, ಘಟನೆಯ ನಿಖರ ಸಮಯ ಹಾಗೂ ಸಂದರ್ಭಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಕಳೆದ ಕೆಲವು ಸಮಯದಿಂದ ರಾಯ್ ಮತ್ತು ಅವರ ಸಂಸ್ಥೆಯ ಚಟುವಟಿಕೆಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಿಗಾವಹಿಸಿದ್ದರು ಎಂಬುದು ತಿಳಿದುಬಂದಿದೆ. ಇತ್ತೀಚಿನ ದಿನಗಳಲ್ಲಿ ಕಚೇರಿ ಮತ್ತು ನಿವಾಸ ಸೇರಿದಂತೆ ಹಲವು ಕಡೆಗಳಲ್ಲಿ ಪದೇ ಪದೇ ಐಟಿ ಅಧಿಕಾರಿಗಳ ಪರಿಶೀಲನೆ ನಡೆದಿತ್ತು. ಅಚ್ಚರಿಯ ಸಂಗತಿಯೆಂದರೆ, ಇಂದು ಕೂಡ ಅಧಿಕಾರಿಗಳು ಅವರ ಮನೆಗೆ ತಪಾಸಣೆಗಾಗಿ ಆಗಮಿಸಿದ್ದ ವೇಳೆ ಅಥವಾ ಅದಕ್ಕೂ ಮುನ್ನ ಈ ದುರ್ಘಟನೆ ನಡೆದಿದೆ ಎಂಬ ಶಂಕೆ ವ್ಯಕ್ತವಾಗಿದೆ.



ನಿರಂತರ ವಿಚಾರಣೆ, ಆರ್ಥಿಕ ಒತ್ತಡ ಹಾಗೂ ಆಸ್ತಿ ಸಂಬಂಧಿತ ಭೀತಿಗಳು ರಾಯ್ ಅವರನ್ನು ತೀವ್ರ ಮಾನಸಿಕ ಒತ್ತಡಕ್ಕೆ ದೂಡಿರಬಹುದು ಎಂಬ ಅನುಮಾನವನ್ನು ತನಿಖಾಧಿಕಾರಿಗಳು ತಳ್ಳಿಹಾಕಿಲ್ಲ. ಆದರೆ ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಯಾವುದೇ ಊಹಾಪೋಹಗಳಿಗೆ ಅವಕಾಶ ನೀಡದೆ ಎಲ್ಲಾ ಆಯಾಮಗಳಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆಯ ಮಾಹಿತಿ ತಿಳಿದ ತಕ್ಷಣ ಅಶೋಕ ನಗರ ಠಾಣೆಯ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ. ಬಳಸಿದ ಪಿಸ್ತೂಲ್ ವಶಕ್ಕೆ ಪಡೆಯಲಾಗಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳದಲ್ಲಿ ಯಾವುದೇ ಮರಣಪತ್ರ ಸಿಕ್ಕಿದೆಯೇ, ಅಥವಾ ಇತರ ದಾಖಲೆಗಳು ದೊರೆತಿವೆಯೇ ಎಂಬುದರ ಕುರಿತು ಪೊಲೀಸರು ಸೂಕ್ಷ್ಮವಾಗಿ ಪರಿಶೀಲನೆ ನಡೆಸುತ್ತಿದ್ದಾರೆ. ಕುಟುಂಬ ಸದಸ್ಯರು, ಸಿಬ್ಬಂದಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಹೇಳಿಕೆಗಳನ್ನು ದಾಖಲಿಸಲಾಗುತ್ತಿದೆ.

ಸಿ.ಜೆ. ರಾಯ್ ಬೆಂಗಳೂರು ಹಾಗೂ ಕೇರಳದಲ್ಲಿ ವ್ಯಾಪಕ ರಿಯಲ್ ಎಸ್ಟೇಟ್ ಯೋಜನೆಗಳನ್ನು ಹೊಂದಿದ್ದ ಪ್ರಮುಖ ಉದ್ಯಮಿ. ವಾಣಿಜ್ಯ ಕ್ಷೇತ್ರದ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಮಾಜಮುಖಿ ಚಟುವಟಿಕೆಗಳಿಗೆ ಸಹ ಅವರು ಬೆಂಬಲ ನೀಡುತ್ತಿದ್ದರೆಂದು ತಿಳಿದುಬಂದಿದೆ. ಅವರ ಅಕಾಲಿಕ ಸಾವಿಗೆ ವ್ಯಾಪಾರ ವಲಯದ ಹಲವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಈ ಪ್ರಕರಣದ ಕುರಿತು ಸಮಗ್ರ ತನಿಖೆ ಮುಂದುವರಿದಿದ್ದು, ಆತ್ಮಹತ್ಯೆಯ ಹಿಂದೆ ನಿಖರ ಕಾರಣಗಳೇನು, ಯಾವುದಾದರೂ ಹೆಚ್ಚುವರಿ ಒತ್ತಡ ಅಥವಾ ವೈಯಕ್ತಿಕ ಕಾರಣಗಳಿವೆಯೇ ಎಂಬುದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ತನಿಖೆ ಪೂರ್ಣಗೊಂಡ ನಂತರವೇ ಸಂಪೂರ್ಣ ಸತ್ಯ ಬಹಿರಂಗವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಶ್ರೀ ಕಾರ್ಯಸಿದ್ಧಿ ವಿನಾಯಕ ದೇಗುಲ ಕುಂಭಾಭಿಷೇಕ



**ಯಶವಂತಪುರ :** ಮನುಷ್ಯನಿಗೆ ಕರ್ಮಾನುಸಾರಶುಭ, ಅಶುಭ ಫಲ ಪ್ರಾಪ್ತಿಯಾಗುತ್ತದೆ. ಕೆಟ್ಟದ್ದಕ್ಕೆ ಕೆಡುಕಾಗುತ್ತದೆ. ಒಳ್ಳೆಯದ್ದಕ್ಕೆ ಒಟ್ಟಿನಲ್ಲಿ ಕರ್ಮದ ಫಲ ಊಹೆಗೂ ನಿಲುಕದಷ್ಟು ಭಿನ್ನವಾಗಿರುತ್ತದೆ ಎಂದು ಶೃಂಗೇರಿಯ ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕ್ಷೇತ್ರದ ಹೇರೋಹಳ್ಳಿ ವಾರ್ಡ್ ಸರ್‌ಎಂ ವಿಶ್ವೇಶ್ವರಯ್ಯನಗರ 8ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಶ್ರೀ ಕಾರ್ಯಸಿದ್ಧಿ ವಿನಾಯಕ ದೇವಸ್ಥಾನ ಸೇವಾ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದಶ್ರೀ ಕಾರ್ಯಸಿದ್ಧಿ ವಿನಾಯಕ ಸ್ವಾಮಿಯ ಪುನರ್ ಪ್ರತಿಷ್ಠಾಪನೆ ಹಾಗೂ ವಿಮಾನ ಗೋಪುರದ ಬ್ರಹ್ಮಕಲಶ, ಕುಂಭಾಭಿಷೇಕ ನೆರವೇರಿಸಿ ಆಶೀರ್ವಚನ ನೀಡಿದರು

ಭಗವಂತನನ್ನು ಭಕ್ತಿಯಿಂದ ಆರಾಧಿಸಬೇಕು. ಧರ್ಮದ ಬಗ್ಗೆ ಅರಿವು ಹೊಂದಿರಬೇಕು ಕಾಯಕವನ್ನು ಶ್ರದ್ಧೆಯಿಂದ ಮಾಡಿದರೆ ಭಗವಂತ ಸಕಾಲದಲ್ಲಿ ನಿರೀಕ್ಷಿತ ಫಲ ಕರುಣಿಸುತ್ತಾನೆ. ಬೆರಳಣಿಕೆಯ ಭ್ರಷ್ಟರ ಶ್ರೀಮಂತಿಕೆಯ ಪ್ರಭಾವಕ್ಕೆ ಒಳಗಾಗಿ ಜೀವನದಲ್ಲಿ ತಪ್ಪು ಹೆಜ್ಜೆ ಇಡಬೇಡಿ. ತಪ್ಪಿತಸ್ಥರಿಗೆ ಭಗವಂತ ತಕ್ಕ ಶಾಸ್ತಿ ಮಾಡಿಯೇ ತೀರುತ್ತಾನೆ. ಅಂತೆಯೇ ಸತ್ಕಾರ್ಯಗಳನ್ನು ಮಾಡಿದವರನ್ನು ಭಗವಂತ ಎಂದಿಗೂ ಕೈ ಬಿಡುವುದಿಲ್ಲ.ಹಾಗಾಗಿ ಧರ್ಮದ ದಾರಿಯಲ್ಲಿ ನಡೆಯಿರಿ ಧಾರ್ಮಿಕ ಕೈಂಕರ್ಯಗಳಲ್ಲಿ ತೊಡಗಿಸಿಕೊಳ್ಳಿ ಎಂದು ಕರೆ ನೀಡಿದರು.

ಶಾಸಕ ಎಸ್.ಟಿ ಸೋಮಶೇಖರ್ ಮಾತನಾಡಿ ದೇಗುಲಗಳು ಮನುಷ್ಯನಿಗೆ ನೆಮ್ಮದಿ, ಮನಃಶಾಂತಿ ನೀಡುವ ಶ್ರದ್ಧಾ ಕೇಂದ್ರಗಳಾಗಿವೆ. ದೈವಾರಾಧನೆಯಲ್ಲಿ ತೊಡಗಿಸಿಕೊಳ್ಳುವುದು ಅನಾದಿ ಕಾಲದಿಂದ ನಡೆದುಕೊಂಡು ಬಂದಿದೆ. ಸನಾತನ ಸತ್ಸಂಪ್ರದಾ ಯವನ್ನು ಮುಂದುವರೆಸಲು ಸದ್ಭಕ್ತರು ವಿಘ್ನ ವಿನಾಯಕನ ದೇಗುಲದಪುನರುಜ್ಜೀವನ ಮಾಡಿರುವುದು ಸಂತಸ ತಂದಿದೆ ಎಂದರು.

ಶ್ರೀ ಕಾರ್ಯಸಿದ್ಧಿ ವಿನಾಯಕ ಸ್ವಾಮಿಯ ಪುನರ್ ಪ್ರತಿಷ್ಠಾಪನೆ ಹಾಗೂ ವಿಮಾನ ಗೋಪುರದ ಬ್ರಹ್ಮಕಲಶ ಕುಂಭಾ ಭಿಷೇಕ ಮಹೋತ್ಸವದ ಪ್ರಯುಕ್ತ ಐದು ದಿನಗಳ ಕಾಲ ವಿವಿಧ ಧಾರ್ಮಿಕ ಕೈಂಕರ್ಯಗಳು ಜರುಗಿದವು.

ಗಂಗಾ ಪೂಜೆ, ಗಣಪತಿ ಪೂಜೆ, ನವಗ್ರಹ, ಮೃತ್ಯುಂಜಯ ಹೋಮ, ವೇದ ಪಾರಾಯಣ, ಬಲಿಪೀಠ ಪ್ರತಿಷ್ಠಾಪನೆ, ಅಷ್ಟಬಂಧನ, ಧ್ವಜಸ್ತಂಭ ಸ್ಥಾಪನೆ, ವಿವಿಧ ಹೋಮ ಹವನ ಪೂರ್ಣಾಹುತಿ, ಷೋಡ ಷೋಪಚಾರ ಪೂಜೆ, ವಿಮಾನ ಗೋಪುರ ಕಲಶ ಸ್ಥಾಪನೆ, ಮಹಾಮಂಗಳಾರತಿ ಶ್ರೀಗಳಿಂದ ಫಲ ಮಂತ್ರಾಕ್ಷತೆ, ತೀರ್ಥ ಪ್ರಸಾದ, ಸಂತರ್ಪಣೆ ನೆರವೇರಿತು. ಬಡಾವಣೆಯ ಪ್ರಮುಖ ಬೀದಿಗಳಲ್ಲಿವಿನಾಯಕನ ಉತ್ಸವ ಮೂರ್ತಿಯ ಮೆರವಣಿಗೆ ವಿಜೃಂಭಣೆ ನಡೆದು ಮಹೋತ್ಸವ ನಿರ್ವಿಘ್ನವಾಗಿ ಸಂಪನ್ನವಾಯಿತು.

ಉದ್ಯಮಿಗಳಾದ ಎಸ್.ಟಿ ಕುಬೇರಸ್ವಾಮಿ, ಎಸ್.ಟಿ ರಮೇಶ್, ಶ್ರೀ ಕಾರ್ಯಸಿದ್ಧಿ ವಿನಾಯಕ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ಓಂ ಪ್ರಕಾಶ್, ಉಪಾಧ್ಯಕ್ಷ ಚಂದ್ರಪ್ಪ,ಪ್ರಧಾನ ಕಾರ್ಯದರ್ಶಿಪಳನಿವೇಲು, ಸರ್‌ಎಂವಿಶ್ವೇಶ್ವರಯ್ಯನಗರ 8ನೇ ಬ್ಲಾಕ್ ನಿವಾಸಿಗಳಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೃಷ್ಣೇಗೌಡಉಪಾಧ್ಯಕ್ಷ ದಯಾನಂದ್ಪ್ರಧಾನ ಕಾರ್ಯದರ್ಶಿ ಹನುಮಂತರಾಜು .ಜಿ. ಎನ್‌ಅಸಂಖ್ಯ ಸದ್ಭಕ್ತರು ದೇವತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು

## ಶ್ರೀವೀರಾಂಜನೇಯ ಸ್ವಾಮಿ ದೇವಸ್ಥಾನ ವತಿಯಿಂದ ಅನ್ನಸಂತರ್ಪಣೆಗೆ ಚಾಲನೆ



**ಪೀಣ್ಯ ದಾಸರಹಳ್ಳಿ** :ಪುರಾತನ ಕಾಲದಿಂದಲೂ ಹಿಂದೂ ದೇವಸ್ಥಾನಗಳಲ್ಲಿ ಅನ್ನ ದಾಸೋಹ, ಶಿಕ್ಷಣ ದಾಸೋಹ, ಆಶ್ರಯ ಮತ್ತು ಸಂಸ್ಕಾರ ಸಂಸ್ಕೃತಿ ಸಂಪ್ರದಾಯ ಹೀಗೆ ಅನೇಕ ಸನಾತನ ಹಿಂದೂ ಧರ್ಮವನ್ನು ಪ್ರಪಂಚದಲ್ಲಿ ಉಳಿದಿರುವ ಅತ್ಯಂತ ಹಳೆಯ ಧರ್ಮವೆಂದು ಕರೆಯಲ್ಪಡುತ್ತವೆ ಎಂದು ರಾಷ್ಟ್ರೀಯ ಹಿಂದೂ ಹೆಲ್ಪ್ ಲೈನ್ ಜನರಲ್ ಕಾರ್ಯದರ್ಶಿ ಹೇಮಂತ್ ತ್ರಿವೇದಿ ಜೀ ಹೇಳಿದರು.

ಅವರು ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಆರ್ ಎಂ ಸಿ ಯಾರ್ಡ್ 9ನೇ ಬಳಿ ಇರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಮಂಗಳವಾರದ ವಿಶೇಷ ಪೂಜಾ ಮತ್ತು ಪ್ರತಿ ಮಂಗಳವಾರ ಸಾವಿರಾರು ಭಕ್ತಾಧಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ವೀರಾಂಜನೇಯ ಸ್ವಾಮಿ ದೇವಸ್ಥಾನದ ಅಧ್ಯಕ್ಷ ಸೆಲ್ವರಾಜ್, ಅಂತರಾಷ್ಟ್ರೀಯ ಹಿಂದೂ ಪರಿಷತ್ ರಾಷ್ಟ್ರೀಯ ಬಜರಂಗದಳದ ರಾಜ್ಯಾಧ್ಯಕ್ಷ ವಿ ಆನಂದ್ ಹಿರಿಯ ಸಮಾಜ ಮುಖಂಡ ಮುನಿರಾಜು ಮತ್ತು ಪ್ರದಾನ ಅರ್ಚಕರಾದ ಶ್ರೀ ಚಂದ್ರಶೇಖರ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವೀರಾಂಜನೇಯ ಸ್ವಾಮಿ ದರ್ಶನ ಪಡೆದು ಅನ್ನಸಂತರ್ಪಣೆ ಚಾಲನೆ ನೀಡಿ ಜನರಲ್ ಕಾರ್ಯದರ್ಶಿ ಹೇಮಂತ್ ತ್ರಿವೇದಿ ಜೀ ಜೈ ಶ್ರೀರಾಮ್ ನಾಮವಳಿ ಪಠಿಸುತ್ತಾ ಭಕ್ತರನ್ನು ಹುರಿ ತುಂಬಿಸಿ ಮಾತನಾಡಿದರು. ಭಾರತೀಯ ಸಂಸ್ಕೃತಿ ಸಂಪ್ರದಾಯ ಪರಂಪರೆದಂತೆ ನಮ್ಮ ಧರ್ಮದ ಆರಾಧ್ಯ ದೈವ ಶ್ರೀ ರಾಮನ ಅಯೋಧ್ಯದಲ್ಲಿ ರಾಮ್ ಆರ್ ಎಂ ಸಿ ಯಾರ್ಡ್ ನಲ್ಲಿ ಬಾಲ ರಾಮನ ಪುತ್ಥಳಿ ನಿರ್ಮಾಣ ಹಂತದಲ್ಲಿದ್ದು ಅತಿ ಶೀಘ್ರದಲ್ಲಿ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಪ್ರತಿಷ್ಠಾನೆ ಮಾಡಲಾಗುತ್ತದೆ ಭಕ್ತಾದಿಗಳು ತಮ್ಮೆಲ್ಲರ ಸೇವಾ ಸಹಕಾರ ತನುಮನ ಧನ ಪ್ರೋತ್ಸಾಹ ನೀಡಿರಿ ಎಂದು ವಿ. ಆನಂದ್ ಮನವಿ ಮಾಡಿಕೊಂಡರು.

ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಅಧ್ಯಕ್ಷ ಸೆಲ್ವರಾಜ್ ಮಾತನಾಡಿ ಈ ಒಂದು ದೇವತಾ ಕಾರ್ಯಕ್ಕೆ ತಮ್ಮ ಶಕ್ತಿ ಅನುಸಾರವಾಗಿ ದೇವಸ್ಥಾನ ಜೀರ್ಣೋದ್ಧಾರ ಮತ್ತು ಅನ್ನದಾನಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯವಿದೆ ಯಾರು ಅನ್ಯತ ಭಾವಿಸ ಬೇಡಿ ಪ್ರೋತ್ಸಾಹ ನೀಡಿರಿ ಎಂದು ಸರ್ವರಿಗೂ ಸ್ವಾಗತಿಸಿ ಮನದಾಳದ ಮಾತುಗಳು ಆಡಿದರು.

ಈ ಸಂದರ್ಭದಲ್ಲಿ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಅಪಾರ ಭಕ್ತಾದಿಗಳು, ಆರ್ ಎಂ ಸಿ ಯಾರ್ಡ್ ಅಂಗಡಿ ಮಾಲೀಕರು ಕಾರ್ಮಿಕರು ಸಮಸ್ತ ನಾಗರಿಕರು ಮಹಿಳೆಯರು ಮುಂತಾದವರು ಇದ್ದು ತೀರ್ಥ ಪ್ರಸಾದ ಸ್ವೀಕರಿಸಿದರು.

## ನಾಲ್ವರು ಕಾರ್ಮಿಕರ ಅನುಮಾನಾಸ್ಪದ ಸಾವು!



**ಬೆಂಗಳೂರು ಗ್ರಾಮಾಂತರ:** ಜಿಲ್ಲೆಯ ಹೊಸಕೋಟೆ ತಾಲೂಕಿನ ಮುತ್ಸಂದ್ರ ಗ್ರಾಮದಲ್ಲಿ ಸಂಭವಿಸಿರುವ ಅನುಮಾನಾಸ್ಪದ ಸಾವಿನ ಘಟನೆ ಜಿಲ್ಲೆಯಾದ್ಯಂತ ಭಾರೀ ಚರ್ಚೆ ಹಾಗೂ ಆತಂಕಕ್ಕೆ ಕಾರಣವಾಗಿದೆ. ಕೋಕಾಕೋಲಾ ವೇರ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ ಅಸ್ಸಾಂ ಮೂಲದ ನಾಲ್ವರು ಯುವ ಕಾರ್ಮಿಕರು ಲೇಬರ್ ಶೆಡ್‌ನಲ್ಲಿ ಮಲಗಿದ್ದ ಸ್ಥಿತಿಯಲ್ಲಿ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಮೃತರು ವೇರ್‌ಹೌಸ್ ಸಮೀಪದಲ್ಲೇ ಇರುವ ಕಾರ್ಮಿಕರ ಶೆಡ್‌ನಲ್ಲಿ ವಾಸವಾಗಿದ್ದರು. ರಾತ್ರಿ ವೇಳೆ ನಾಲ್ವರೂ ಶೆಡ್‌ನೊಳಗೆ ಅಡುಗೆ ಮಾಡಿಕೊಂಡು, ನಂತರ ಕಿಟಕಿ ಹಾಗೂ ಬಾಗಿಲುಗಳನ್ನು ಸಂಪೂರ್ಣವಾಗಿ ಮುಚ್ಚಿಕೊಂಡು ಮಲಗಿದ್ದರೆಂದು ತಿಳಿದುಬಂದಿದೆ. ಬೆಳಗಿನ ಜಾವ ಅವರು ಎದ್ದುಕೊಳ್ಳದೇ ಇದ್ದುದನ್ನು ಗಮನಿಸಿದ ಇತರ ಕಾರ್ಮಿಕರು ಪರಿಶೀಲನೆ ನಡೆಸಿದಾಗ ನಾಲ್ವರೂ ಪ್ರಾಣ ಕಳೆದುಕೊಂಡಿರುವುದು ದೃಢಪಟ್ಟಿದೆ.

ಮೃತರನ್ನು ಜಯಂತ್ ಸಿಂಧೆ (25), ನೀರೇಂದ್ರನಾಥ್ (24), ಡಾಕ್ಟರ್ ಟೈಡ್ (25) ಹಾಗೂ ಧನಂಜಯ್ ಟೈಡ್ (20) ಎಂದು ಗುರುತಿಸಲಾಗಿದೆ. ಎಲ್ಲರೂ ಅಸ್ಸಾಂ ಮೂಲದವರಾಗಿದ್ದು, ಜೀವನೋಪಾಯಕ್ಕಾಗಿ ಬೆಂಗಳೂರಿಗೆ ಬಂದು ವೇರ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಶೆಡ್ ಒಳಗೆ ಗಾಳಿ ಸಂಚಾರಕ್ಕೆ ಅವಕಾಶ ಇಲ್ಲದಂತೆ ಬಾಗಿಲು-ಕಿಟಕಿಗಳನ್ನು ಮುಚ್ಚಿಕೊಂಡಿದ್ದ ಕಾರಣ, ಅಡುಗೆ ವೇಳೆ ಹೊರಬಂದ ಹೊಗೆ ಅಥವಾ ಅನಿಲದಿಂದ ಉಸಿರುಗಟ್ಟಿ ಸಾವನ್ನಪ್ಪಿರಬಹುದೆಂಬ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ.

ಘಟನೆಯ ಮಾಹಿತಿ ತಿಳಿದ ತಕ್ಷಣ Sulikere Police Station ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ. ಶೆಡ್ ಒಳಗಿನ ಪರಿಸ್ಥಿತಿ, ಅಡುಗೆ ಸಾಮಗ್ರಿಗಳು ಹಾಗೂ ಇತರ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ. ಸಾವಿನ ನಿಖರ ಕಾರಣ ತಿಳಿಯಲು ಮರಣೋತ್ತರ ಪರೀಕ್ಷೆಗೆ ಮೃತದೇಹಗಳನ್ನು ರವಾನಿಸಲಾಗಿದ್ದು, ವರದಿ ಬಂದ ನಂತರವೇ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ದುರ್ಘಟನೆ ಮುತ್ಸಂದ್ರ ಗ್ರಾಮ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಆತಂಕ ಮೂಡಿಸಿದ್ದು, ಕಾರ್ಮಿಕರ ಸುರಕ್ಷತೆ ಹಾಗೂ ವಾಸ ವ್ಯವಸ್ಥೆಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ. ಪ್ರಕರಣ ಸಂಬಂಧ ಸೂಲಿಬೆಲೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಎಲ್ಲ ಆಯಾಮಗಳಲ್ಲಿ ತನಿಖೆ ಮುಂದುವರಿದಿದೆ.

## 532ಕ್ಕೂ ಹೆಚ್ಚು ಜನರಿಗೆ ಆರೋಗ್ಯ ತಪಾಸಣೆ




**ಬೆಂಗಳೂರು:**ಹೊಸಬೆಳಕು ಟ್ರಸ್ಟ್(ರಿ)ಯ 20ನೇ ವಾರ್ಷಿಕೋತ್ಸವದ ಅಂಗವಾಗಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಶಿಬಿರ, ನೇತ್ರ-ಅಂಗಾಂಗ-ದೇಹದಾನಿಗಳಿಗೆ ನಮನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜಿಗಣಿಯ ಸೆಂಟ್ ಜೋಸೆಫ್ ಹೈಸ್ಕೂಲಿನಲ್ಲಿ ನಡೆಯಿತು.

ಹೊಸಬೆಳಕು ಟ್ರಸ್ಟ್ ಸಂಸ್ಥಾಪಕ ಜಿಗಣಿ ರಾಮಕೃಷ್ಣ ಅವರ ತಂದೆ ದಿವಂಗತ ಡ್ರೈವರ್ ಮುನಿಶಾಮಯ್ಯ ಹಾಗೂ ತಾಯಿ ನೇತ್ರದಾನಿ ದಿವಂಗತ ಶ್ರೀಮತಿ ಸೊಣ್ಣಮ್ಮ ಅವರ ಸ್ಮರಣಾರ್ಥವಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ 63ಕ್ಕೂ ಹೆಚ್ಚು ನೇತ್ರದಾನಿ ಕುಟುಂಬಗಳು, ಕಣ್ಣು ಪ್ರತಿರೋಪಣೆ ಮಾಡಿಕೊಂಡ ನಾಲ್ವರು, ಮೂವರು ದೇಹದಾನಿ ಕುಟುಂಬಗಳು ಹಾಗೂ ಕಿಡ್ನಿ-ಲಿವರ್ ದಾನ ಮಾಡಿದ ಎರಡು ಕುಟುಂಬಗಳನ್ನು ಗೌರವಿಸಲಾಯಿತು.

ಅಂತರಾಷ್ಟ್ರೀಯ ಪ್ಯಾರಾ ತ್ರೋಬಾಲ್ ತಂಡದ ನಾಯಕಿ ಶ್ರೀಮತಿ ರೇಣುಕಾ ಮತ್ತು ತಂಡ, ಸರ್ಕಾರಿ ಶಾಲೆಗಳ 10ನೇ ತರಗತಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳು, ಆನೇಕಲ್ ತಾಲ್ಲೂಕಿನ ಕಬ್ಬಡ್ಡಿಯಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಯುವತಿ-ಯುವಕರು, 100ಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿದವರು, ವೈದ್ಯರು, ಆಸ್ಪತ್ರೆಗಳು, ರಕ್ತ ಹಾಗೂ ನೇತ್ರ ನಿದಿಗಳು, ನರ್ಸ್‌ಗಳು, ಆಂಬುಲೆನ್ಸ್ ಚಾಲಕರು, ಸೂಲಗಿತ್ತಿಯರು ಹಾಗೂ ಕರೋನಾ ಯೋಧರನ್ನು ಸನ್ಮಾನಿಸಲಾಯಿತು.

ಆರೋಗ್ಯ ಶಿಬಿರದಲ್ಲಿ ನಾರಾಯಣ ನೇತ್ರಾಲಯದಿಂದ ಕಣ್ಣಿನ ಕಾಯಿಲೆಗಳ ತಪಾಸಣೆ, ಉಚಿತ ಕನ್ನಡಕ ಹಾಗೂ ಪೊರೆ ಶಸ್ತ್ರಚಿಕಿತ್ಸೆ, ನಾರಾಯಣ ಹೃದಯಾಲಯದಿಂದ ಹೃದಯ ತಪಾಸಣೆ ಹಾಗೂ ಇಸಿಜಿ, ದಿ ಆಕ್ಸ್‌ಫರ್ಡ್ ಆಸ್ಪತ್ರೆಯಿಂದ ಸಾಮಾನ್ಯ, ಮಕ್ಕಳ, ಇಎನ್‌ಟಿ, ಮೂಳೆ ಮತ್ತು ಚರ್ಮ ರೋಗಗಳ ತಪಾಸಣೆ ನಡೆಸಲಾಯಿತು. ಡಾ. ಲಾವಣ್ಯಕಿರಣ್ ಅವರ ಲಕ್ಷ್ಯ ವುಮನ್ ಮತ್ತು ಫರ್ಟಿಲಿಟಿ ಕ್ಲಿನಿಕ್ ವತಿಯಿಂದ ಸ್ತ್ರೀರೋಗ ಹಾಗೂ ಬಂಜೆತನ ತಪಾಸಣೆ ನಡೆಯಿತು.

ಬಯೋಕಾನ್ ಫೌಂಡೇಶನ್ ವತಿಯಿಂದ ಕ್ಯಾನ್ಸರ್ ತಪಾಸಣೆ, ಶ್ರೀ ವೆಂಕಟೇಶ್ವರ ಡೆಂಟಲ್ ಕಾಲೇಜು ಆಸ್ಪತ್ರೆಯಿಂದ ದಂತ ತಪಾಸಣೆ, ಏಕನಾ ಆಸ್ಪತ್ರೆಯಿಂದ ರಕ್ತ ಪರೀಕ್ಷೆ ನಡೆಸಲಾಯಿತು. ಜೊತೆಗೆ ನೇತ್ರ, ಅಂಗಾಂಗ ಹಾಗೂ ದೇಹದಾನ ನೋಂದಣಿ ಮತ್ತು ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಶಿಬಿರದಲ್ಲಿ 532ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದು, 123 ಜನರಿಗೆ ಇಸಿಜಿ, 104 ಜನರಿಗೆ ಉಚಿತ ಕನ್ನಡಕ, 38 ಜನರಿಗೆ ಉಚಿತ ಪೊರೆ ಶಸ್ತ್ರಚಿಕಿತ್ಸೆ ಸೇರಿದಂತೆ ವಿವಿಧ ಆರೋಗ್ಯ ಸೌಲಭ್ಯಗಳು ದೊರಕಿದವು.

ಡಾ. ರಾಮಕೃಷ್ಣ ಮಾತನಾಡಿ, ತಂದೆ-ತಾಯಿ ಹೆಸರಿನಲ್ಲಿ ನಡೆಯುತ್ತಿರುವ ಈ ಸೇವೆ ಸಮಾಜಕ್ಕೆ ಬೆಳಕು ನೀಡುವ ಕೆಲಸವಾಗಿದೆ. ಎಲ್ಲರೂ ಅಂಗಾಂಗ ದಾನಕ್ಕೆ ಮುಂದಾಗಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಡಾ. ಲಾವಣ್ಯಕಿರಣ್, ಡಾ. ಎನ್. ಕೃಷ್ಣಪ್ಪ, ಜಿಗಣಿ ವಿನೋದ್, ಜೆ.ಸಿ. ಕೃಷ್ಣಪ್ಪ, ಬಿ.ಸಿ. ಮೋಹನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

## ತಿರುಪತಿ ಲಡ್ಡು ವಿವಾದ: ಗೋಮಾಂಸ-ಹಂದಿ ಕೊಬ್ಬು ಇಲ್ಲ, ಸಿಬಿಐ ಸ್ಪಷ್ಟನೆ

**ತಿರುಪತಿ:** ವಿಶ್ವವಿಖ್ಯಾತ ತಿರುಪತಿ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಲಡ್ಡು ಪ್ರಸಾದಕ್ಕೆ ಬಳಸಲಾಗುತ್ತಿದ್ದ ತುಪ್ಪದ ಕುರಿತು ಉದ್ಭವಿಸಿದ್ದ ಭಾರೀ ವಿವಾದಕ್ಕೆ ಇದೀಗ ಮಹತ್ವದ ತಿರುವು ದೊರೆತಿದೆ. ಕೇಂದ್ರ ತನಿಖಾ ದಳ (ಸಿಬಿಐ) ನಡೆಸಿದ ಸಮಗ್ರ ತನಿಖೆಯ ಬಳಿಕ, ಲಡ್ಡು ತಯಾರಿಕೆಗೆ ಬಳಸಿದ ತುಪ್ಪದಲ್ಲಿ ಗೋಮಾಂಸ ಅಥವಾ ಹಂದಿ ಕೊಬ್ಬು ಬಳಸಲಾಗಿಲ್ಲ ಎಂದು ಸ್ಪಷ್ಟಪಡಿಸಿದೆ. ಆದರೆ, ಈ ತುಪ್ಪವು ಶುದ್ಧ ಹಸುವಿನ ತುಪ್ಪವಾಗಿರದೇ, ಸಸ್ಯಜನ್ಯ ಎಣ್ಣೆ ಹಾಗೂ ವಿವಿಧ ರಾಸಾಯನಿಕಗಳ ಮಿಶ್ರಣದಿಂದ ತಯಾರಿಸಲಾಗುತ್ತಿತ್ತು ಎಂಬ ಆಘಾತಕಾರಿ ಸಂಗತಿ ಬಹಿರಂಗವಾಗಿದೆ.

ಈ ಪ್ರಕರಣದ ತನಿಖೆಯನ್ನು ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ಕೈಗೊಂಡಿದ್ದು, ಇತ್ತೀಚೆಗೆ ನೆಲ್ಲೂರಿನ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯಕ್ಕೆ ಅಂತಿಮ ಆರೋಪಪಟ್ಟಿಯನ್ನು ಸಲ್ಲಿಸಿದೆ. ಆರೋಪಪಟ್ಟಿಯ ಪ್ರಕಾರ, ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ)ಗೆ ಪೂರೈಕೆಯಾಗುತ್ತಿದ್ದ ತುಪ್ಪ ಹಾಲಿನ ಉತ್ಪನ್ನವೇ ಆಗಿರಲಿಲ್ಲ. ತಾಳೆ ಎಣ್ಣೆ, ತಾಳೆ ಬೀಜದ ಎಣ್ಣೆ ಸೇರಿದಂತೆ ಇತರ ಸಸ್ಯಜನ್ಯ



ಎಣ್ಣೆಗಳನ್ನೇ ಮೂಲ ಪದಾರ್ಥವಾಗಿ ಬಳಸಲಾಗುತ್ತಿತ್ತು.

ತುಪ್ಪಕ್ಕೆ ಶುದ್ಧ ಹಸುವಿನ ತುಪ್ಪದ ಬಣ್ಣ, ವಾಸನೆ ಮತ್ತು ರುಚಿ ಬರಲೆಂದು ಅಸಿಟಿಕ್ ಆ್ಯಸಿಡ್ ಎಸ್ಟರ್, ಬೀಟಾ ಕ್ಯಾರೊಟಿನ್ ಮೊದಲಾದ ರಾಸಾ ಯನಿಕಗಳನ್ನು ಸೇರಿಸಲಾಗುತ್ತಿತ್ತು. ಇದರಿಂದ ಪ್ರಯೋಗಾಲಯದ ಪರೀಕ್ಷೆಗಳಲ್ಲೂ ತುಪ್ಪ ಮಾನದಂಡಗಳಿಗೆ ತಕ್ಕಂತೆ ಕಾಣುವಂತೆ ಮಾಡಲಾಗುತ್ತಿತ್ತು. ಈ ಅಕ್ರಮ ವ್ಯವಹಾರವು ಒಂದೆರಡು ವರ್ಷಗಳಲ್ಲ, ಹಲವು ವರ್ಷಗಳಿಂದ ನಡೆಯುತ್ತಿದ್ದು, ಸುಮಾರು 68 ಲಕ್ಷ ಕಿಲೋಗ್ರಾಂಗಳಷ್ಟು ನಕಲಿ ತುಪ್ಪವನ್ನು 250 ಕೋಟಿ ರೂಪಾಯಿ ಮೌಲ್ಯದಲ್ಲಿ ಪೂರೈಕೆ ಮಾಡಲಾಗಿದೆ ಎಂದು ಸಿಬಿಐ ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದೆ.

**ತುಪ್ಪದ ಮರುಬಳಕೆ:**ತನಿಖೆಯಲ್ಲಿ ಮತ್ತೊಂದು ಗಂಭೀರ ಅಂಶವೂ ಬೆಳಕಿಗೆ ಬಂದಿದೆ. ತುಪ್ಪ ಟ್ಯಾಂಕರ್‌ಗಳನ್ನು ನಾಶಪಡಿಸುವ ಬದಲು, ಮರುಬಳಕೆ ಮಾಡಲಾಗಿದೆ. ಇಂತಹ ಕೆಲ ತಿರಸ್ಕೃತ ಬ್ಯಾಚ್‌ಗಳಲ್ಲಿ ಹಂದಿ ಹಾಗೂ ಗೋವಿನ ಕೊಬ್ಬಿನ ಅಂಶಗಳು ಪತ್ತೆಯಾಗಿವೆ. ಆದರೆ, ಈ ತುಪ್ಪವನ್ನು ಲಡ್ಡು ಪ್ರಸಾದ ತಯಾರಿಕೆಗೆ ಬಳಸಿಲ್ಲ ಎಂದು ಸಿಬಿಐ ಸ್ಪಷ್ಟಪಡಿಸಿದೆ. ಅಂದರೆ, ಅಧಿಕೃತವಾಗಿ ಪರೀಕ್ಷಿಸಿ ಅನುಮೋದಿಸಿದ ತುಪ್ಪದಲ್ಲಿ ಯಾವುದೇ ಪ್ರಾಣಿ ಕೊಬ್ಬು ಇರಲಿಲ್ಲ ಎಂಬುದನ್ನು ತನಿಖಾ ಸಂಸ್ಥೆ ಖಚಿತಪಡಿಸಿದೆ.

**36 ಮಂದಿಯ ವಿರುದ್ಧ ಆರೋಪ:**ಅಂತಿಮ ಆರೋಪಪಟ್ಟಿಯಲ್ಲಿ ಒಟ್ಟು 36 ಮಂದಿ ಆರೋಪಿಗಳಾಗಿ ಗುರುತಿಸಲಾಗಿದೆ. ಇವರಲ್ಲಿ ಟಿಟಿಡಿ ಆಡಳಿತ ಮಂಡಳಿಯ ಕೆಲವು ಅಧಿಕಾರಿಗಳು, ಉತ್ತರಾಖಂಡ ಮೂಲದ ತುಪ್ಪ ಪೂರೈಕೆದಾರರು, ಗುಣಮಟ್ಟ ಪರೀಕ್ಷೆ ನಡೆಸಿ ಸುಳ್ಳು ವರದಿ ನೀಡಿದ ಪ್ರಯೋಗಾಲಯ ಸಿಬ್ಬಂದಿ, ಲಂಚ ಹಾಗೂ ಉಡುಗೊರೆ ಪಡೆದು ಅಕ್ರಮಕ್ಕೆ ಸಹಕರಿಸಿದ ಮಧ್ಯವರ್ತಿಗಳು ಸೇರಿದ್ದಾರೆ.

## ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಿ: ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ



**ಬೆಂಗಳೂರು ಗ್ರಾಮಾಂತರ:**ಪಂಚಾಯಿತಿಗಳು ಹೈಟೆಕ್ ಕಟ್ಟಡ ಹೊಂದುವುದರೊಂದಿಗೆ ತ್ವರಿತವಾಗಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವಂತಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ದೇವನಹಳ್ಳಿ ತಾಲೂಕಿನ ಕಸಬಾ ಹೋಬಳಿಯ ಬಿದಲೂರು ಗ್ರಾಮ ಪಂಚಾಯತಿಯ ನೂತನ ಕಟ್ಟಡ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು. ಎಸ್.ಪಿ.ಮುನಿರಾಜು ಅವರು ಅಧ್ಯಕ್ಷರಾಗಿದ್ದಾಗ ಪ್ರೆಸ್ಟೀಜ್ ಕಂಪನಿಯ ಸಿ.ಎಸ್.ಆರ್ ನಿಧಿಯಿಂದ 02 ಕೋಟಿ ವೆಚ್ಚದಲ್ಲಿ ನಾನೆ ಗುದ್ದಲಿ ಪೂಜೆ ನೆರವೇರಿಸಿದ್ದೆ ಈಗ ಪ್ರಕಾಶ್ ಅವರು ಅಧ್ಯಕ್ಷರಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಉತ್ತಮ ಕಟ್ಟಡವನ್ನು ಉದ್ಘಾಟಿಸಿದ್ದೇನೆ.

ಜನಪ್ರತಿನಿಧಿಗಳು, ಅಧಿಕಾರಿಗಳು ಪಂಚಾಯತಿಗಳಿಗೆ ಕೆಲಸಗಳನ್ನರಸಿ ಬರುವ ಸಾರ್ವಜನಿಕರಿಗೆ ತ್ವರಿತವಾಗಿ ಕೆಲಸಗಳನ್ನು ಮಾಡಿಕೊಡುವುದರ ಜೊತೆಗೆ ಸರಕಾರದ ಸೌಲಭ್ಯಗಳನ್ನು ಜನರಿಗೆ ತಲುಪಿಸಿದಾಗ ಜನ ನಮ್ಮನ್ನು ನೆನೆಯುತ್ತಾರೆ ಅಂತಹ ಕೆಲಸ ಸದಸ್ಯರು, ಅಧಿಕಾರಿಗಳು ಮಾಡಬೇಕು.

ತಾಲೂಕಿನಲ್ಲಿ ಗ್ರಾಮಪಂಚಾಯತಿ ಮೊದಲನೆ ಸ್ಥಾನಕ್ಕೆ ತಲುಪಬೇಕು, ಅದೇ ರೀತಿ ಬಡವರನ್ನು ಗುರುತಿಸಿ ಅವರಿಗೆ ನಿವೇಶನ, ಒಳಚರಂಡಿ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಕೆಲಸ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಬಮುಲ್ ನಿರ್ದೇಶಕ ಎಸ್.ಪಿ.ಮುನಿರಾಜು, ಬಯಪ ಅಧ್ಯಕ್ಷ ಶಾಂತಕುಮಾರ್, ಸದಸ್ಯ ಪ್ರಸನ್ನಕುಮಾರ್, ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಕೆ.ಸಿ.ಮಂಜುನಾಥ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಬಿ.ರಾಜಣ್ಣ, ತಾಲೂಕು ಅಧ್ಯಕ್ಷ ಸಿ.ಜಗನ್ನಾಥ್, ಬಿದಲೂರು ಗ್ರಾಮಪಂಚಾಯತಿ ಅಧ್ಯಕ್ಷ ಪ್ರಕಾಶ್, ಇಒ ಶ್ರೀನಾಥ್ ಗೌಡ, ಪಿಡಿಓ ಸಿದ್ದರಾಜು, ಬಿದಲೂರು ಗ್ರಾಮಸ್ಥರು,ಮತ್ತಿತರರು ಇದ್ದರು.

**ಸುದ್ದಿ ಹಾಗೂ ಜಾಹೀರಾತುಗಾಳಿಗಾಗಿ ಸಂಪರ್ಕಿಸಿ 9538786812\8217606793**

# ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ರಿಕಾ ಪ್ರಕಟಣೆ

**ಕರ್ನಾಟಕ:**ದ ಸಮಸ್ತ ಜನತೆಯ ಪರವಾಗಿ ರಾಜ್ಯ ಸರ್ಕಾರವು 16th Finance Commission ಮುಂದೆ ಹಲವು ನ್ಯಾಯಸಮ್ಮತ, ಸಂವಿಧಾನಬದ್ಧ ಮತ್ತು ರಾಜ್ಯದ ಹಿತಾಸಕ್ತಿಗೆ ಸಂಬಂಧಿಸಿದ ಪ್ರಮುಖ ಬೇಡಿಕೆಗಳನ್ನು ಮಂಡಿಸಿದೆ. ಸಮಾನ ಹಂಚಿಕೆ, ನ್ಯಾಯಯುತ ತೆರಿಗೆ ಪಾಲು ಹಾಗೂ ಒಕ್ಕೂಟ ವ್ಯವಸ್ಥೆಯ ಬಲವರ್ಧನೆ ಎಂಬ ತತ್ವದ ಆಧಾರದಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಬೇಕು ಎಂಬುದು ರಾಜ್ಯದ ಸ್ಪಷ್ಟ ಒತ್ತಾಯವಾಗಿದೆ. ರಾಜ್ಯದ ತೆರಿಗೆ ಪಾಲು ಹೆಚ್ಚಿಸುವುದು, ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ನ್ಯಾಯ ನೀಡುವುದು, ವಿಶೇಷ ಅನುದಾನಗಳನ್ನು ಒದಗಿಸುವುದು ಸೇರಿದಂತೆ ಹಲವು ವಿಷಯಗಳಲ್ಲಿ ಕೇಂದ್ರ-ರಾಜ್ಯ ಹಣಕಾಸು ಸಂಬಂಧಗಳನ್ನು ನ್ಯಾಯಾಧಾರಿತವಾಗಿ ಮರುಪರಿಶೀಲಿಸಬೇಕು ಎಂಬುದು ಕರ್ನಾಟಕದ ಬೇಡಿಕೆಯಾಗಿದೆ.

ಈ ಹಿನ್ನಲೆಯಲ್ಲಿ, "ನ್ಯಾಯಕ್ಕಾಗಿ ಕನ್ನಡಿಗರ ಹೋರಾಟ" ಎಂಬ ಸಾಮಾಜಿಕ ಜಾಲತಾಣ ಅಭಿಯಾನವನ್ನು ಕೈಗೊಂಡಿದ್ದು, ಈ ಕುರಿತು ಮಾಹಿತಿ ಹಾಗೂ ವಿಚಾರಗಳನ್ನು ಪತ್ರಿಕೆಗಳು, ಯೂಟ್ಯೂಬ್ ಮತ್ತು ಟಿವಿ ಸುದ್ದಿ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಜನರಿಗೆ ತಲುಪಿಸಿ, ಕರ್ನಾಟಕ ಹಾಗೂ ಕನ್ನಡಿಗರ ಹಿತಕ್ಕಾಗಿ ಆರಂಭಿಸಲಾದ ಈ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ವಿನಂತಿಸಲಾಗಿದೆ.




**16ನೇ ಹಣಕಾಸು ಆಯೋಗದ ಮುಂದೆ ಕರ್ನಾಟಕದ ಪ್ರಮುಖ ಬೇಡಿಕೆಗಳು**

**1. ತೆರಿಗೆ ಪಾಲಿನ ಭಾರೀ ಕಡಿತ – ಘೋರ ಅನ್ಯಾಯ:**14ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಶೇ 4.71ರಷ್ಟು ತೆರಿಗೆ ಪಾಲು ನೀಡಲಾಗಿತ್ತು. ಆದರೆ 15ನೇ ಹಣಕಾಸು ಆಯೋಗದಲ್ಲಿ ಇದನ್ನು ಶೇ 3.64ಕ್ಕೆ ಇಳಿಸುವ ಮೂಲಕ ರಾಜ್ಯಕ್ಕೆ ಶೇ 23ರಷ್ಟು ನೇರ ನಷ್ಟ ಉಂಟಾಯಿತು. ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ ₹100ರಲ್ಲಿ ಹಿಂದೆ ಕರ್ನಾಟಕಕ್ಕೆ ₹4.71 ದೊರೆಯುತ್ತಿದ್ದರೆ, ನಂತರ ಅದು ₹3.64ಕ್ಕೆ ಇಳಿಯಿತು. ಇದರ ಪರಿಣಾಮವಾಗಿ ಸುಮಾರು ₹80,000 ಕೋಟಿ ಮೊತ್ತದ ತೆರಿಗೆ ಪಾಲು ಕರ್ನಾಟಕಕ್ಕೆ ಸಿಗದೆ ಹೋಗಿದೆ.

ದೇಶದ ಆರ್ಥಿಕ ಚಟುವಟಿಕೆಗೆ ಪ್ರಮುಖ ಚಾಲಕವಾಗಿರುವ ಕರ್ನಾಟಕ, ತಲಾ ಆರ್ಥಿಕ ಉತ್ಪಾದಕತೆಯಲ್ಲಿ ಮೊದಲ ಸ್ಥಾನದಲ್ಲಿದ್ದು, ಕೇಂದ್ರ ಸರ್ಕಾರಕ್ಕೆ ತೆರಿಗೆ, ಸೆಸ್ ಮತ್ತಿತರ ರೂಪಗಳಲ್ಲಿ ವರ್ಷಕ್ಕೆ ₹4.5–₹5 ಲಕ್ಷ ಕೋಟಿ ಸಂಗ್ರಹಕ್ಕೆ ಕಾರಣವಾಗುತ್ತದೆ. ಆದರೆ ಕೇಂದ್ರದಿಂದ ಅತ್ಯಂತ ಕಡಿಮೆ ತೆರಿಗೆ ಪಾಲು ಹಾಗೂ ಅನುದಾನ ಪಡೆಯುತ್ತಿರುವ ರಾಜ್ಯವಾಗಿರುವುದು ವಿಪರ್ಯಾಸ. ಹೀಗಾಗಿ ಕನಿಷ್ಠ 14ನೇ ಹಣಕಾಸು ಆಯೋಗ ನೀಡಿದ್ದ ಶೇ 4.71ರಷ್ಟು ಪಾಲನ್ನು ಮರಳಿ ನೀಡಬೇಕು; ಅದಕ್ಕಿಂತ ಹೆಚ್ಚಿನ ಪಾಲು ನೀಡಿದಾಗ ಮಾತ್ರ ನೈಜ ನ್ಯಾಯ ಸಿಕ್ಕಂತಾಗುತ್ತದೆ.

**2. 'ಆದಾಯ ದೂರ' ಸೂತ್ರದ ದೋಷ:**15ನೇ ಹಣಕಾಸು ಆಯೋಗದಲ್ಲಿ 'ಇನ್‌ಕಂ ಡಿಸ್ಟೆನ್ಸ್' ಅಥವಾ ಆದಾಯ ದೂರ ಸೂತ್ರಕ್ಕೆ ಶೇ 45ರಷ್ಟು ಪ್ರಾಮುಖ್ಯ ನೀಡಲಾಗಿದೆ. ಕರ್ನಾಟಕದ ತಲಾ ಆದಾಯ ಹೆಚ್ಚಿದೆ ಎಂಬ ಕಾರಣಕ್ಕೆ ಕಡಿಮೆ ಪಾಲು ನೀಡಲಾಗಿದೆ. ಆದರೆ ತಲಾ ಆದಾಯವು ಆರ್ಥಿಕತೆಯನ್ನು ಅಳೆಯುವ ಅನೇಕ ಮಾನದಂಡಗಳಲ್ಲಿ ಒಂದಷ್ಟೇ. ರಾಜ್ಯದ ಸಂಪತ್ತನ್ನು ಶ್ರೀಮಂತರು ಮತ್ತು ಬಡವರನ್ನೆಲ್ಲ ಒಂದೇ ತಕ್ಕಡಿಯಲ್ಲಿ ಅಳೆಯಲಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಕೇಂದ್ರದ ನೀತಿಗಳಿಂದ ಸಂಪತ್ತು ಕೆಲವೇ ಜನರ ಬಳಿ ಕೇಂದ್ರೀಕೃತವಾಗಿದ್ದು, ಜಾಗತಿಕ ಅಸಮಾನತಾ ಅಧ್ಯಯನಗಳ ಪ್ರಕಾರ ಶೇ 50ರಷ್ಟು ಜನರು ಕೇವಲ ಶೇ 15ರಷ್ಟು ಆದಾಯ ಗಳಿಸುತ್ತಿದ್ದಾರೆ, ಆದರೆ ಶೇ 10ರಷ್ಟು ಶ್ರೀಮಂತರು ಶೇ 58ಕ್ಕಿಂತ ಹೆಚ್ಚು ಆದಾಯವನ್ನು ಪಡೆಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲರನ್ನೂ ಒಂದೇ ಅಳತೆಯಲ್ಲಿ ತೂಕಮಾಡಿ ಅನುದಾನ ಕಡಿತಗೊಳಿಸುವುದು ಅನ್ಯಾಯ. ಕಲ್ಯಾಣ ಕರ್ನಾಟಕ ಸೇರಿದಂತೆ ಹಲವು ಜಿಲ್ಲೆಗಳ ತಲಾ ಆದಾಯ ರಾಷ್ಟ್ರದ ಸರಾಸರಿಗಿಂತ ಕಡಿಮೆ ಇದೆ ಎಂಬುದನ್ನು ಆಯೋಗಕ್ಕೆ ಮನವರಿಕೆ ಮಾಡಲಾಗಿದೆ. ಆದ್ದರಿಂದ ಈ ಸೂತ್ರದ ಪ್ರಾಮುಖ್ಯವನ್ನು ಶೇ 45ರಿಂದ ಶೇ 25ಕ್ಕೆ ಇಳಿಸಬೇಕು.

**3. ಜಿಎಸ್‌ಡಿಪಿ ಲೆಕ್ಕಾಚಾರದ ಮೂಲ ವರ್ಷದ ಬದಲಾವಣೆ:**15ನೇ ಹಣಕಾಸು ಆಯೋಗವು ಜಿಎಸ್‌ಡಿಪಿ ಲೆಕ್ಕಾಚಾರಕ್ಕೆ 2004–05ರ ಬದಲು 2011–12ನ್ನು ಮೂಲ ವರ್ಷವನ್ನಾಗಿ ತೆಗೆದುಕೊಂಡಿದ್ದು, ಇದರಿಂದ ಕರ್ನಾಟಕಕ್ಕೆ ಭಾರೀ ನಷ್ಟವಾಗಿದೆ. ಐಟಿ ಕ್ರಾಂತಿಯ ನಂತರ ಬೆಂಗಳೂರು ಪ್ರಮುಖ ಕೇಂದ್ರವಾಗಿ ಬೆಳೆಯಿತು. ಐಟಿ ರಫ್ತಿನಿಂದ ಕೇಂದ್ರಕ್ಕೆ ಅಪಾರ ಲಾಭವಾಗಿದ್ದರೂ, ಇದರ ಪರಿಣಾಮವಾಗಿ ಕರ್ನಾಟಕದ ಜಿಎಸ್‌ಡಿಪಿ ಕೃತಕವಾಗಿ ಹೆಚ್ಚಾಗಿ ಕಾಣುವಂತಾಗಿದೆ. ಮೂಲ ವರ್ಷ ಬದಲಾವಣೆಯಿಂದ ಕರ್ನಾಟಕದ ಜಿಎಸ್‌ಡಿಪಿ ಬೆಳವಣಿಗೆ ಶೇ 33ರಷ್ಟು ಹೆಚ್ಚಿದಂತೆ ತೋರಿಸಲಾಗಿದ್ದು, ಇತರೆ ರಾಜ್ಯಗಳ ಸರಾಸರಿ ಶೇ 5.6ರಷ್ಟೇ. ಈ ಅಸಮಾನ ಲೆಕ್ಕಾಚಾರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಹೀಗಾಗಿ ಈ ಮಾನದಂಡವನ್ನು ವಾಸ್ತವಿಕವಾಗಿ ಸರಿಪಡಿಸಬೇಕು.

**4. ಜನಸಂಖ್ಯಾ ಮಾನದಂಡದ ಅನ್ಯಾಯ**1971ರ ಜನಸಂಖ್ಯೆಯ ಬದಲು 2011ರ ಜನಗಣತಿಯನ್ನು ಆಧಾರವನ್ನಾಗಿ ಮಾಡಿಕೊಂಡ ಕಾರಣ, ಜನಸಂಖ್ಯಾ ನಿಯಂತ್ರಣದಲ್ಲಿ ಯಶಸ್ವಿಯಾದ ರಾಜ್ಯಗಳಿಗೆ ಶಿಕ್ಷೆಯಂತಾಯಿತು. ಅಭಿವೃದ್ಧಿ ಸಾಧಿಸಿದ ರಾಜ್ಯಗಳನ್ನು ಪ್ರೋತ್ಸಾಹಿಸುವ ಬದಲು ದಂಡಿಸುವಂತಾಗಿದೆ. ಆದ್ದರಿಂದ 1971ರ ಜನಸಂಖ್ಯೆಯನ್ನೇ ಮಾನದಂಡವನ್ನಾಗಿ ತೆಗೆದುಕೊಳ್ಳಬೇಕು ಮತ್ತು ಜನಸಂಖ್ಯೆಗೆ ನೀಡಿರುವ ಪ್ರಾಮುಖ್ಯವನ್ನು ವೈಜ್ಞಾನಿಕವಾಗಿ ಮರುಪರಿಶೀಲಿಸಬೇಕು.

**5. ಪ್ರಕೃತಿ ವಿಕೋಪ ಪರಿಹಾರಕ್ಕೆ ನ್ಯಾಯ:**ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಅನುದಾನಗಳನ್ನು ವೈಜ್ಞಾನಿಕವಾಗಿ ಹಂಚಿಕೆ ಮಾಡಬೇಕು. 2018–24ರ ಅವಧಿಯಲ್ಲಿ ಕರ್ನಾಟಕವು ಪ್ರಕೃತಿ ವಿಕೋಪಗಳಿಂದ ₹1.56 ಲಕ್ಷ ಕೋಟಿ ನಷ್ಟ ಅನುಭವಿಸಿದೆ. 2002ರಿಂದಲೂ ಬರ, ಅತಿವೃಷ್ಟಿ, ಪ್ರವಾಹಗಳು ನಿರಂತರವಾಗಿವೆ. ಇಷ್ಟಿದ್ದರೂ ಕೇವಲ 5 ರಿಸ್ಕ್ ಫ್ಯಾಕ್ಟರ್ ಅಂಕ ನೀಡಲಾಗಿದೆ. ಇದನ್ನು ಕನಿಷ್ಠ 15ಕ್ಕೆ ಹೆಚ್ಚಿಸಬೇಕು.

**6.ವಿಕೇಂದ್ರೀಕರಣಕ್ಕೆಪ್ರೋತ್ಸಾಹ:**ಪಂಚಾಯತ್ ಅಧಿಕಾರ ಹಂಚಿಕೆ ಸೂಚ್ಯಂಕವನ್ನು ಅಳವಡಿಸಿ, ವಿಕೇಂದ್ರೀಕರಣದಲ್ಲಿ ಉತ್ತಮ ಸಾಧನೆ ಮಾಡಿದ ರಾಜ್ಯಗಳಿಗೆ ಪ್ರೋತ್ಸಾಹ ನೀಡಬೇಕು. ಜನಸಂಖ್ಯೆಗೆ ಶೇ 60, ಭೌಗೋಳಿಕ ವಿಸ್ತೀರ್ಣಕ್ಕೆ ಶೇ 20 ಮತ್ತು ಅಧಿಕಾರ ಹಂಚಿಕೆ ಸೂಚ್ಯಂಕಕ್ಕೆ ಶೇ 20ರಷ್ಟು ತೂಕ ನೀಡಬೇಕು.

**7. ಕಲ್ಯಾಣ ಕರ್ನಾಟಕಕ್ಕೆ ವಿಶೇಷ ನೆರವು:**ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕಕ್ಕೆ 5 ವರ್ಷಗಳಲ್ಲಿ ₹25,000 ಕೋಟಿ ಮೀಸಲಿಟ್ಟಿದೆ. ಕೇಂದ್ರ ಸರ್ಕಾರವೂ ಅದಕ್ಕೆ ಸಮಾನವಾದ ಮ್ಯಾಚಿಂಗ್ ಗ್ರ್ಯಾಂಟ್ ನೀಡಬೇಕು. ಜೊತೆಗೆ ಪರಿಸರ ಸಂರಕ್ಷಣೆ ಮತ್ತು ವಿಪತ್ತು ನಿರ್ವಹಣೆಗೆ ₹10,000 ಕೋಟಿ ವಿಶೇಷ ಪ್ಯಾಕೇಜ್ ಒದಗಿಸಬೇಕು.

**8. ಪರಿಸರ ಸಂವೇದನಾಶೀಲ ಪ್ರದೇಶಗಳಿಗೆ ಅನುದಾನ:**ಮಲೆನಾಡು, ಕರಾವಳಿ ಮತ್ತು ಪಶ್ಚಿಮ ಘಟ್ಟಗಳು ಇಡೀ ದೇಶದ ಪರಿಸರ ಸಮತೋಲನಕ್ಕೆ ಅತ್ಯಂತ ಪ್ರಮುಖವಾಗಿವೆ. ಅಲ್ಲಿನ ಕೃಷಿಕರ ಬದುಕು ಸಂಕಷ್ಟದಲ್ಲಿದೆ. ವಿಶೇಷ ಅನುದಾನ ನೀಡಬೇಕು. ಜೊತೆಗೆ ರಾಜಸ್ಥಾನದ ನಂತರ ಅತಿ ಹೆಚ್ಚು ಒಣ ಭೂಮಿ ಹೊಂದಿರುವ ರಾಜ್ಯವಾಗಿರುವುದರಿಂದ, ನೀರಾವರಿಗೆ ಹೆಚ್ಚಿನ ನೆರವು ಅಗತ್ಯವಿದೆ.

**9.ಬೆಂಗಳೂರುಮೂಲಸೌಕರ್ಯ ಅಭಿವೃದ್ಧಿ:**ಮುಂದಿನ 5 ವರ್ಷಗಳಲ್ಲಿ ಬೆಂಗಳೂರಿಗೆ ಕನಿಷ್ಠ ₹1.15 ಲಕ್ಷ ಕೋಟಿ ಹೂಡಿಕೆ ಅಗತ್ಯವಿದ್ದು, 16ನೇ ಹಣಕಾಸು ಆಯೋಗವು ಕನಿಷ್ಠ ₹27,793 ಕೋಟಿ ಅನುದಾನ ಶಿಫಾರಸು ಮಾಡಬೇಕು.

**10. ರಾಜ್ಯಗಳ ಪಾಲು ಹೆಚ್ಚಳ**ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ಒತ್ತಾಯಿಸಿದ್ದಂತೆ, ರಾಜ್ಯಗಳಿಗೆ ಹಂಚಿಕೆ ಮಾಡುತ್ತಿರುವ ಶೇ 41ರಷ್ಟು ಪಾಲನ್ನು ಶೇ 50ಕ್ಕೆ ಹೆಚ್ಚಿಸಬೇಕು. ಸೆಸ್ ಮತ್ತು ಸರ್ಚಾರ್ಜ್‌ಗಳನ್ನು ಕೇಂದ್ರದ ಆದಾಯದ ಶೇ 5ಕ್ಕೆ ಸೀಮಿತಗೊಳಿಸಿ, ಉಳಿದ ಮೊತ್ತವನ್ನು ರಾಜ್ಯಗಳಿಗೆ ಹಂಚಬೇಕು ಎಂಬುದು ಕರ್ನಾಟಕದ ಸಮಸ್ತ ನಾಗರಿಕರ ಪರವಾಗಿ ಮುಂದಿಡಲಾಗಿರುವ ಮಹತ್ವದ ಒತ್ತಾಯವಾಗಿದೆ.

ಈ ಎಲ್ಲ ಬೇಡಿಕೆಗಳು ಕರ್ನಾಟಕದ ಅಭಿವೃದ್ಧಿ, ಸಮಾನತೆ ಮತ್ತು ಒಕ್ಕೂಟ ವ್ಯವಸ್ಥೆಯ ಬಲವರ್ಧನೆಗಾಗಿ ಅಗತ್ಯವಾಗಿದ್ದು, 16ನೇ ಹಣಕಾಸು ಆಯೋಗವು ನ್ಯಾಯದ ನೆಲೆಯಲ್ಲಿ ಅವುಗಳನ್ನು ಪರಿಗಣಿಸಬೇಕೆಂದು ರಾಜ್ಯ ಸರ್ಕಾರ ಆಗ್ರಹಿಸಿದೆ.

## ಬೀದರ್‌ನಲ್ಲಿ ಮತ್ತೆ ನಿಗೂಢ ಸ್ಫೋಟ

**ಬೀದರ್:**ಜಿಲ್ಲೆಯ ತಾಲೂಕಿನ ಮೊಳಕೇರಾ ಗ್ರಾಮದಲ್ಲಿ ಮತ್ತೊಮ್ಮೆ ನಿಗೂಢ ಸ್ಫೋಟ ಸಂಭವಿಸಿದ್ದು, ಗ್ರಾಮಸ್ಥರಲ್ಲಿ ಭಾರೀ ಭೀತಿ ಹಾಗೂ ಆತಂಕದ ವಾತಾವರಣ ನಿರ್ಮಾಣವಾಗಿದೆ. ಈ ಬಾರಿ ಶಾಲೆಗೆ ತೆರಳುತ್ತಿದ್ದ ಆರು ಮಂದಿ ಬಾಲಕರು ಹಾಗೂ ಅವರ ಜೊತೆಗೆ ನಡೆದು ಹೋಗುತ್ತಿದ್ದ ಒಬ್ಬ ವ್ಯಕ್ತಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಪೈಕಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.



ಮೊಳಕೇರಾ ಗ್ರಾಮದ ಮೋಳಗಿ ಮಾರಯ್ಯ ದೇವಸ್ಥಾನಕ್ಕೆ ತೆರಳುವ ಮುಖ್ಯ ರಸ್ತೆಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಇದು ಪ್ರತಿದಿನ ಬೆಳಿಗ್ಗೆ ಶಾಲಾ ಮಕ್ಕಳು, ಕಾರ್ಮಿಕರು ಹಾಗೂ ಗ್ರಾಮಸ್ಥರು ನಿರಂತರವಾಗಿ ಸಂಚರಿಸುವ ಅತ್ಯಂತ ಪ್ರಮುಖ ಮಾರ್ಗವಾಗಿದ್ದು, ಜನ ಸಂಚಾರ ಹೆಚ್ಚಿರುವ ಪ್ರದೇಶದಲ್ಲೇ ಸ್ಫೋಟ ಸಂಭವಿಸಿರುವುದು ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ. ಎಂದಿನಂತೆ ಶಾಲೆಗೆ ಹೊರಟಿದ್ದ ಮಕ್ಕಳು ರಸ್ತೆ ಬದಿಯಲ್ಲಿದ್ದ ಅನುಮಾನಾಸ್ಪದ ವಸ್ತುವಿನ ಬಳಿ ಬಂದ ಕ್ಷಣದಲ್ಲೇ ಏಕಾಏಕಿ ಭಾರೀ ಶಬ್ದದೊಂದಿಗೆ ಸ್ಫೋಟ ಸಂಭವಿಸಿದೆ ಎಂದು ಹೇಳಲಾಗಿದೆ.

ಸ್ಫೋಟದ ತೀವ್ರತೆಯಿಂದಾಗಿ ಕೆಲ ಮಕ್ಕಳಿಗೆ ಹಾಗೂ ಒಬ್ಬ ವ್ಯಕ್ತಿಗೆ ಕಾಲು, ಕೈ ಮತ್ತು ಮುಖದ ಭಾಗಗಳಲ್ಲಿ ಗಂಭೀರ ಗಾಯಗಳಾಗಿದ್ದು, ರಕ್ತಸ್ರಾವವಾಗಿದೆ. ಸುತ್ತಮುತ್ತಲಿನ ಗ್ರಾಮಸ್ಥರು ತಕ್ಷಣವೇ ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಘಟನೆಯ ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ದೌಡಾಯಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. ಭದ್ರತಾ ದೃಷ್ಟಿಯಿಂದ ಸ್ಫೋಟ ನಡೆದ ಪ್ರದೇಶವನ್ನು ಸಂಪೂರ್ಣವಾಗಿ ಸೀಲ್ ಮಾಡಿ ಪರಿಶೀಲನೆ ನಡೆಸಲಾಗುತ್ತಿದೆ.

ಸ್ಫೋಟದ ಮೂಲ ಹಾಗೂ ಸ್ವರೂಪ ಪತ್ತೆಹಚ್ಚುವ ಸಲುವಾಗಿ ಸೋಕೋ (Scene of Crime Officer) ತಂಡವನ್ನು ಸ್ಥಳಕ್ಕೆ ಕರೆಸಲಾಗಿದ್ದು, ಸ್ಫೋಟಗೊಂಡ ವಸ್ತುವಿನ ಅವಶೇಷಗಳನ್ನು ಸಂಗ್ರಹಿಸಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ. ಈ ಮಧ್ಯೆ, ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ Pradeep Gunti ಭೇಟಿ ನೀಡಿ ಸ್ವತಃ ಪರಿಶೀಲನೆ ನಡೆಸುತ್ತಿದ್ದು, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

ಗ್ರಾಮಸ್ಥರನ್ನು ಕಾಡುತ್ತಿರುವ ಮತ್ತೊಂದು ಆತಂಕಕಾರಿ ಅಂಶವೆಂದರೆ, ಮೊಳಕೇರಾ ಗ್ರಾಮದಲ್ಲಿ ಈ ರೀತಿಯ ನಿಗೂಢ ಸ್ಫೋಟಗಳು ಇದೇ ಮೊದಲಲ್ಲ. ಕಳೆದ ಆರು ತಿಂಗಳ ಅವಧಿಯಲ್ಲಿ ಇದು ಐದನೇ ಅಥವಾ ಆರನೇ ಸ್ಫೋಟವಾಗಿದ್ದು, ಪ್ರತಿ ಬಾರಿ ಗ್ರಾಮದ ವಿಭಿನ್ನ ಭಾಗಗಳಲ್ಲಿ ಇಂತಹ ಘಟನೆಗಳು ಸಂಭವಿಸಿವೆ. ಆದರೆ ಇದುವರೆಗೂ ಯಾವುದೇ ಸ್ಫೋಟಕ್ಕೂ ನಿಖರ ಕಾರಣ ಪತ್ತೆಯಾಗದೆ ಇರುವುದರಿಂದ ಗ್ರಾಮಸ್ಥರಲ್ಲಿ ಭಯ, ಅಸಮಾಧಾನ ಮತ್ತು ಆತಂಕ ಹೆಚ್ಚುತ್ತಲೇ ಹೋಗುತ್ತಿದೆ.




Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.